# ಪಸರಿಪ ಕನ್ನಡಕೆ ಒಡೆಯನೋರ್ವನೆ ಪಂಪನಾವಗಂ



ಪುರುಷೋತ್ತಮ ಬಿಳಿಮಲೆ

ಪಂಪನು 'ವಿಕ್ರಮಾರ್ಜುನ ವಿಜಯ' ಮತ್ತು 'ಆದಿ ಪುರಾಣ' ಎಂಬೆರಡು ಮಹಾಕಾವ್ಯಗಳನ್ನು ಬರೆದು ಒಂದು ಸಾವಿರದ ಎಪ್ಪತ್ತು ವರ್ಷಗಳಾದುವು. ಈ ಸುದೀರ್ಘ ಕಾಲಾವಧಿಯಲ್ಲಿ ಆತ ಕನ್ನಡದ ಆದಿಕವಿಯಾಗಿಯೂ ಮಹಾಕವಿಯಾಗಿಯೂ ಉಳಿದುಕೊಂಡೇ ಬಂದಿದ್ದಾನೆ. ಪಂಪನ ಆನಂತರ ಬರೆದ ಹೆಚ್ಚಿನ ಕವಿಗಳೆಲ್ಲರೂ ಅವನನ್ನು ಸ್ಮರಿಸಿಯೇ ತಮ್ಮ ಕಾವ್ಯ ರಚನೆಯನ್ನು ಸುರು ಮಾಡಿದ್ದಾರೆ. 1331ರಲ್ಲಿದ್ದ ನಾಗರಾಜನೆಂಬ ಕವಿಯಂತೂ 'ಪಸರಿಪ ಕನ್ನಡಕ್ಕೊಡೆಯನೋರ್ವನೆ ಸತ್ಕವಿ ಪಂಪನಾವಗಂ' ಎಂದು ಘೋಷಿಸಿದ. ಅವನ ಮಾತು ಕಡಲಿನ ಅಲೆಯ ಹಾಗೆ ಮತ್ತೆ ಮತ್ತೆ ಮಾರ್ದನಿಕೊಡುತ್ತಾ ಇವತ್ತಿನವರೆಗೆ ಉಳಿದುಬಂದದ್ದು ಸಣ್ಣ ಸಂಗತಿಯೇನಲ್ಲ. ವೇಮುಲವಾಡದ ಚಾಲುಕ್ಯರ ಸಾಮಂತನಾಗಿದ್ದ ಇಮ್ಮಡಿ ಅರಿಕೇಸರಿಯ ಆಸ್ಥಾನದಲ್ಲಿದ್ದ ಪಂಪ ಅಲ್ಲಿ ಬರೇ ಕವಿತೆ ಬರೆದುಕೊಂಡು ಕುಳಿತವನಲ್ಲ, ಬದಲು ಅಗತ್ಯ ಬಿದ್ದಾಗ ಯುದ್ಧಕ್ಕೂ ಹೋಗುತ್ತಿದ್ದ. ಈ ಕುರಿತು ಅವನೇ 'ಏಂ ಕಲಿಯೋ ಸತ್ಕವಿಯೋ ಕವಿತಾ ಗುಣಾರ್ಣವಂ' ಎಂದು ಸ್ವಾಭಿಮಾನದಿಂದ ಉದ್ಗರಿಸಿಕೊಂಡಿದ್ದಾನೆ. ಪಂಪನ ಕಾಲದವನೇ ಆದ ಕವಿ ಪೊನ್ನನು 'ಕವಿರತ್ನತ್ರಯರಲ್ಲಿ ಪಂಪನೂ ಒಬ್ಬ' ಎಂದು ಹೇಳಿದ್ದಲ್ಲದೆ, ಪಂಪನನ್ನು 'ಜಿನಸಮಯದೀಪಕ' ಎಂದು ಕರೆದು ಗೌರವಿಸಿದ. 12ನೇ ಶತಮಾನದ ಇನ್ನೊಬ್ಬ ಮಹತ್ವದ ಕವಿ ನಾಗಚಂದ್ರನು ತನ್ನನ್ನು ತಾನೇ 'ಅಭಿನವ ಪಂಪ'ಎಂದು ಕರೆದುಕೊಂಡದ್ದಲ್ಲದೆ ತಾನು ಬರೆದ 'ರಾಮಚಂದ್ರ ಚರಿತ ಪುರಾಣವನ್ನು ಪಂಪ ರಾಮಾಯಣ' ವೆಂದೇ ಜನರು ಗುರುತಿಸುವಂತೆ ಮಾಡಿಕೊಂಡು ಆದಿಕವಿಗೆ ತನ್ನ ಗೌರವ ಸಲ್ಲಿಸಿದ.

ಆಧುನಿಕ ವಿಮರ್ಶಕರು ಪಂಪನನ್ನು 'ನಾಡೋಜ' ಎಂದು ಕರೆಯುತ್ತಾರೆ. ಮುಳಿಯ ತಿಮ್ಮಪ್ಪಯ್ಯನವರು 'ನಾಡೋಜ ಪಂಪ' ಎಂಬ ಗ್ರಂಥವನ್ನೇ ಬರೆದರು. 'ನಾಡಿನ ಗುರು' ಎಂಬ ಅರ್ಥ ಈ ಪದಕ್ಕಿದೆ. ಪಂಪಪೂರ್ವ ಯುಗದ ಕವಿರಾಜಮಾರ್ಗ, ಮತ್ತು ವಡ್ಡಾರಾಧನೆಯಲ್ಲಿ ಕಂಡುಬರುವ 'ಓವಜ' ಅಥವಾ 'ಓಜ' ಪದವನ್ನು ಪಂಪನು ತನ್ನ ವಿಕ್ರಮಾರ್ಜುನ ವಿಜಯದಲ್ಲಿ ದ್ರೋಣನಿಗೆ ಬಳಸುತ್ತಾನೆ. 13ನೇ ಆಶ್ವಾಸದ ಕೊನೆಯಲ್ಲಿ ಅರ್ಜುನನಿಗೂ ಅನ್ವಯಿಸುತ್ತಾನೆ. ಇಷ್ಟೆಲ್ಲಾ ಮಾಡಿ ಕೊನೆಗೆ, 'ನಾಡೊವಜನಾದನೊ ಪೇಙ್ ಕವಿತಾಗುಣಾರ್ಣವಂ' ಎಂದು ನಾಡೋಜ ಬಿರುದನ್ನು ತನಗೇ ತಾನೇ ಅನ್ವಯಿಸಿಕೊಳ್ಳುತ್ತಾನೆ! ಏನೇ ಇರಲಿ, ಪಂಪನು ಅಲ್ಲಿಯವರೆಗೆ